# ಕರ್ನಾಟಕ ವಿಧಾನಪರಿಷತ್ತಿನ ನಡವಳಿಕೆಗಳು
# KARNATAKA LEGISLATIVE COUNCIL DEBATES

ಅಧಿಕೃತ ವರದಿ

OFFICIAL REPORT

೧೨೯ನೇ ಅಧಿವೇಶನ

129th Session

(24ನೇ ನವೆಂಬರ್ 2015)

**(24th NOVEMBER 2015)**

ಸಂಪುಟ ೪೩೯ ಕ್ರಮಾಂಕ (೨)

Volume 439 No. (2)

ಕರ್ನಾಟಕ ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

**Karnataka Legislature Secretariat, Bengaluru**

# ಕರ್ನಾಟಕ ವಿಧಾನಪರಿಷತ್ತಿನ ನಡವಳಿಕೆಗಳು
# KARNATAKA LEGISLATIVE COUNCIL DEBATES

ಅಧಿಕೃತ ವರದಿ

OFFICIAL REPORT

೧೨೯ನೇ ಅಧಿವೇಶನ

129th Session

(24ನೇ ನವೆಂಬರ್ 2015)

**(24th NOVEMBER 2015)**


ಸಂಪುಟ ೪೩೯ ಕ್ರಮಾಂಕ (೨)

Volume 439 No. (2)



ಕರ್ನಾಟಕ ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

**Karnataka Legislature Secretariat, Bengaluru**

# ಕರ್ನಾಟಕ ವಿಧಾನ ಪರಿಷತ್ತು

ದಿನಾಂಕ: 24ನೇ ನವೆಂಬರ್ 2015
ಮಂಗಳವಾರ

## ವಿಷಯಾನುಕ್ರಮಣಿಕೆ


**1. ಸಂತಾಪ ಸೂಚನೆ** **1–11**

(ಶ್ರೀ ಆರ್. ಜಗದೀಶ್‌ಕುಮಾರ್ ಅವರ ನಿಧನ)

– ಶ್ರೀ ಎಸ್.ಆರ್.ಪಾಟೀಲ್ (ಸಭಾ ನಾಯಕರು)

– ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)


-----------

**ಕರ್ನಾಟಕ ವಿಧಾನ ಪರಿಷತ್ತು**
ಮಂಗಳವಾರ, 24ನೇ ನವೆಂಬರ್ 2015

ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ *ಪೂರ್ವಾಹ್ನ 11 ಗಂಟೆ 13 ನಿಮಿಷಕ್ಕೆ* ಸಮಾವೇಶಗೊಂಡಿತು.

ಸಭಾಪತಿ **(ಶ್ರೀ ಡಿ.ಹೆಚ್.ಶಂಕರಮೂರ್ತಿ)** ಅವರು ಪೀಠದಲ್ಲಿ ಉಪಸ್ಥಿತರಿದ್ದರು.

**ಸಭಾಪತಿಯವರುಃ–** ಈ ಬಾರಿಯ ಅಧಿವೇಶನದಲ್ಲಿ ದೇವರಿಗೆ ಯಾಕೋ ಏನೋ ಕರ್ನಾಟಕದ ಪ್ರಮುಖ ಗಣ್ಯರ ಮೇಲೆ ಪ್ರೀತಿ ಬಂದಿದೆಯೋ ಅಥವಾ ಸಿಟ್ಟು ಬಂದಿದೆಯೋ ಗೊತ್ತಿಲ್ಲ. ದೇವರು ನಮ್ಮ ಜೊತೆಗಿದ್ದವರಲ್ಲಿ ಕೆಲವರನ್ನು ಕರೆಸಿಕೊಳ್ಳುತ್ತಿದ್ದಾನೆ.

## 1. ಸಂತಾಪ ಸೂಚನೆ

ವಿಷಯಃ ಹಾಲಿ ವಿಧಾನಸಭಾ ಸದಸ್ಯರಾಗಿದ್ದ ಶ್ರೀ ಆರ್.ಜಗದೀಶ್‌ಕುಮಾರ್ ಅವರ ನಿಧನದ ಬಗ್ಗೆ

– – –

**ಸಭಾಪತಿಯವರುಃ–**

**ಪ್ರಸಕ್ತ ವಿಧಾನ ಸಭೆಯ ಸದಸ್ಯರಾಗಿದ್ದ ಶ್ರೀ ಆರ್. ಜಗದೀಶ್ ಕುಮಾರ್ ಅವರು ದಿನಾಂಕ: 23.11.2015ರಂದು ಸಂಜೆ ಬೆಂಗಳೂರಿನ ವಿಕ್ರಮ್ ಆಸ್ಪತ್ರೆಯಲ್ಲಿ ಹೃದಯಘಾತದಿಂದ ನಿಧನರಾಗಿರುವುದನ್ನು ಈ ಸದನಕ್ಕೆ ತಿಳಿಸಲು ವಿಷಾಧಿಸುತ್ತೇನೆ.**

**ಶ್ರೀಯುತರು** 1957ರ ಡಿಸೆಂಬರ್, 10ರಂದು ಬೆಂಗಳೂರಿನಲ್ಲಿ ಜನಿಸಿದ್ದರು. ಶ್ರೀಯುತರು ಬಿ.ಇ. ಎಲೆಕ್ಟ್ರಾನಿಕ್ಸ್ ಪದವೀಧರರಾಗಿದ್ದು, ಎಬಿವಿಪಿ ಶಾಖಾ ಕಾರ್ಯದರ್ಶಿಯಾಗಿ ಶೈಕಣಿಕ ಸಮಸ್ಯೆ ಮುಂದಿಟ್ಟುಕೊಂಡು ಹಲವು ಹೋರಾಟ ಮಾಡಿದ್ದಲ್ಲದೇ, ರಾಜ್ಯ ಮತ್ತು ರಾಷ್ಟ್ರೀಯ ವಿದ್ಯಾರ್ಥಿ ಸಮಾವೇಶಗಳಲ್ಲಿ ಭಾಗವಹಿಸಿದ್ದರು. ರಾಷ್ಟ್ರೀಯ ವಿಚಾರಧಾರೆಗಳನ್ನು ಮೈಗೂಡಿಸಿಕೊಂಡಿದ್ದ ಶ್ರೀಯುತರು ಸಂಘಟನೆ ಹಾಗೂ ಹೋರಾಟದಿಂದ ಶಿಸ್ತುಬದ್ಧ ಜೀವನ ನಡೆಸಿದ್ದರು.

ವೃತ್ತಿಯಲ್ಲಿ ಆರ್ಥಿಕ ಸಲಹೆಗಾರರಾಗಿದ್ದ ಶ್ರೀಯುತರು ದೇಶದ ಪ್ರತಿಷ್ಠಿತ ವಾಣಿಜ್ಯ ಸಂಸ್ಥೆಯಾಗಿರುವ ಬೆಂಗಳೂರು ಷೇರು ವಿನಿಮಯ ಕೇಂದ್ರದ ಅಧ್ಯಕ್ಷರಾಗಿ ಮೂರು ಅವಧಿಗೆ ಸೇವೆಯನ್ನು ಸಲ್ಲಿಸಿರುತ್ತಾರೆ. ಶ್ರೀಯುತರು ಭೂ ಕಂದಾಯ, ಹಣಕಾಸು ವಿಚಾರಗಳಲ್ಲಿ ಹಾಗೂ ಕಾನೂನು ವಿಷಯಗಳಲ್ಲಿಯೂ ಸಹ ಪರಿಣಿತಿಯನ್ನು ಹೊಂದಿದ್ದರು.

ಬೆಂಗಳೂರಿನ ಹೆಬ್ಬಾಳ ವಿಧಾನ ಸಭಾ ಕ್ಷೇತ್ರದಿಂದ 2013ರಲ್ಲಿ 14ನೇ ವಿಧಾನ ಸಭೆಗೆ ನಡೆದ ಚುನಾವಣೆಯಲ್ಲಿ ಮೊದಲನೇ ಬಾರಿಗೆ ಚುನಾಯಿತರಾಗಿದ್ದ ಇವರು ಸದನದ ಕಾರ್ಯಕಲಾಪಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಅಮೂಲ್ಯ ಸಲಹೆಗಳನ್ನು ನೀಡಿರುತ್ತಾರೆ. ಶ್ರೀಯುತರು ದೈವಾಧೀನರಾಗುವ ದಿನದಲ್ಲೂ ಸಹ ಬೆಳಗ್ಗೆಯಿಂದ ಭೋಜನಾ ವಿರಾಮದವರೆಗೂ ವಿಧಾನ ಸಭಾ ಕಾರ್ಯಕಲಾಪದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯಕ್ಕೆ ತುಂಬಲಾರದ ನಷ್ಟವುಂಟಾಗಿರುತ್ತದೆ.

**ಶ್ರೀ ಎಸ್.ಆರ್.ಪಾಟೀಲ್(ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಶ್ರೀಯುತರ ವಿಚಾರವಾಗಿ ಮಾತುಗಳನ್ನಾಡಲು ಅವಕಾಶವನ್ನು ಕಲ್ಪಿಸಿರುವ ತಮಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಈ ಅಧಿವೇಶನದಲ್ಲಿ ಮೂರು ಜನ ಹಾಲಿ ಸದಸ್ಯರ ಸಂತಾಪ ಸೂಚನೆ ನಿರ್ಣಯವನ್ನು ತಾವು ಮಂಡಿಸಿದ್ದೀರಿ. ಇದು ನೋವಿನ ಸಂಗತಿಯಾಗಿದೆ. ಅದರಲ್ಲೂ ವಿಶೇಷವಾಗಿ ನಿನ್ನೆ ಹಠಾತ್ ವಿಧಿವಶರಾದ ಶ್ರೀ ಆರ್.ಜಗದೀಶ್‌ಕುಮಾರ್‌ರವರ ನಿಧನದ ವಾರ್ತೆ ಎಲ್ಲ ಶಾಸಕ ಮಿತ್ರರಿಗೆ ಹಾಗೂ ಈ ಸದನಕ್ಕೆ ಬರಸಿಡಿಲು ಬಡಿದಂತಾಗಿದೆ. ಏಕೆಂದರೆ, ನಿನ್ನೆ ಬೆಳಿಗ್ಗೆ ಅವರು ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದಾರೆ. ನಾನು ನಿನ್ನೆ ಕೆಳಮನೆಗೆ ಹೋಗಿರಲಿಲ್ಲ. ನಿನ್ನೆ ಮಧ್ಯಾಹ್ನ ಅವರು ತಮ್ಮ ಸ್ನೇಹಿತರ ಜೊತೆಗೆ ಊಟ ಮಾಡಿದ ನಂತರ ಎದೆಯಲ್ಲಿ ಏನೋ ನೋವು ಕಾಣಿಸಿಕೊಂಡ ಪ್ರಯುಕ್ತ ಆಸ್ಪತ್ರೆಗೆ ಹೋಗಿದ್ದಾರೆ. ಅಲ್ಲಿಯೇ ಹೃದಯಾಘಾತದಿಂದ ನಿಧನರಾಗಿದ್ದಾರೆ. ಇದು ಬಹಳಷ್ಟು ಆಶ್ಚರ್ಯದ ಸಂಗತಿಯಾಗಿದೆ. ಅವರು ವೈದ್ಯರಿಂದ ಮತ್ತು ಆಸ್ಪತ್ರೆಯಿಂದ ದೂರವಿದ್ದರು. ಆದರೂ ಕೊನೆಯ ಘಳಿಗೆಯಲ್ಲಿ ಆಸ್ಪತ್ರೆಯಲ್ಲಿಯೇ ಲಘು ಹೃದಯಾಘಾತದಿಂದ ನಿಧನ ಹೊಂದಿದ್ದಾರೆ. ಅವರ ನಿಧನದಿಂದ ಸಾರ್ವಜನಿಕ ವಲಯದಕ್ಕೆ ಸಾಕಷ್ಟು ನಷ್ಟವುಂಟಾಗಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಆರ್.ಜಗದೀಶ್‌ಕುಮಾರ್‌ರವರು ಅತ್ಯುತ್ತಮ ಸಂಸದೀಯಪಟುವಾಗಿದ್ದರು. ಪ್ರಥಮ ಬಾರಿಗೆ ಶಾಸಕರಾಗಿ ಎರಡೂವರೆ ವರ್ಷಗಳ ಅವಧಿಯಲ್ಲಿ ವಿಧಾನಸಭೆಯ ಕಲಾಪಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದರ ಮೂಲಕ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿದ್ದರು. ವಿಶೇಷವಾಗಿ ಬೆಂಗಳೂರು ಅಭಿವೃದ್ಧಿಯ ಬಗ್ಗೆ ಅನೇಕ ಸಲಹೆಗಳನ್ನು ನೀಡಿದ್ದರು. ನಾನು ಸಚಿವನಾದ ನಂತರ ಕೆಳಮನೆಯಲ್ಲಿ ನನಗೆ ಮೊದಲನೆಯ ಪ್ರಶ್ನೆಯನ್ನು ಅವರೇ ಕೇಳಿದ್ದರು. 'ಐ.ಟಿ.ಎ.ಆರ್ ಎನ್ನುವುದು ಅತ್ಯಂತ ಪ್ರತಿಷ್ಠಿತ ಯೋಜನೆಯಾಗಿದೆ. ಈ ಯೋಜನೆ ಸುಮಾರು 40 ಲಕ್ಷ ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿಕೊಡುತ್ತದೆ. ಸರ್ಕಾರ ಬದ್ಧತೆಯಿಂದ ಬೇಗ ಈ ಕೆಲಸ ಕೈಗೆತ್ತಿಗೊಳ್ಳುತ್ತದೆಯೇ?' ಎನ್ನುವ ಪ್ರಶ್ನೆಯನ್ನು ಅವರು ಕೇಳಿದ್ದರು. ನಂತರ ನನ್ನನ್ನು ಭೇಟಿ ಮಾಡಿದಾಗ, 'ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಸುಮಾರು ಹತ್ತೂವರೆ ಸಾವಿರ ಎಕರೆ ಜಮೀನನ್ನು ತೆಗೆದುಕೊಂಡು ಬೇಗನೇ ಆ ಕೆಲಸವನ್ನು ಪ್ರಾರಂಭ ಮಾಡಬೇಕು. ಇಲ್ಲದಿದ್ದರೆ ಆಂಧ್ರಪ್ರದೇಶದವರು ನಮ್ಮ ರಾಜ್ಯದ ಗಡಿಯಲ್ಲಿ ಐ.ಟಿ.ಎ.ಆರ್.ನ್ನು ಸ್ಥಾಪನೆ ಮಾಡಿದರೆ, ಅದಕ್ಕೆ ಮಹತ್ವ ಹೋಗುತ್ತದೆ. ಆ ದೃಷ್ಟಿಯಿಂದ ಪ್ರತಿಷ್ಠವಾದ ಈ ಯೋಜನೆಯನ್ನು ತಾವು ಬೇಗನೆ ಕೈಗೆತ್ತಿಕೊಳ್ಳಬೇಕು. ಇದು ನಮ್ಮ ರಾಜ್ಯದ ಸುಮಾರು 40 ಲಕ್ಷ ಜನರಿಗೆ ಉದ್ಯೋಗವನ್ನು ಕಲ್ಪಿಸಿಕೊಡುತ್ತದೆ.' ಎಂದು ಒತ್ತಾಯ ಮಾಡಿರುವುದನ್ನು ನಾನು ನೆನಪಿಸಿಕೊಳ್ಳುತ್ತೇನೆ. ಇಂತಹ ಬದ್ಧತೆ ಇರುವ ಮತ್ತು ಸ್ನೇಹ ಜೀವಿಯಾದ ಜಗದೀಶ್‌ಕುಮಾರ್‌ರವರು ಇಂದು ನಮ್ಮೊಂದಿಗಿಲ್ಲ. ಸುದ್ದಿವಾಹಿನಿಗಳಲ್ಲಿ ಅವರು ಬಹಳಷ್ಟು

ಭಾಗವಹಿಸುತ್ತಿದ್ದರು. ಸರ್ಕಾರದ ಮುಖ್ಯ ಸಚೇತಕರಾದ ಶ್ರೀ ಆರ್.ವಿ.ವೆಂಕಟೇಶ್‌ರವರು ಮತ್ತು ಅವರು ಜೊತೆಜೊತೆಯಾಗಿ ವಾರದಲ್ಲಿ ಒಂದೆರಡು ಸಲ ವಾಹಿನಿಗಳಲ್ಲಿ ಕಾಣಿಸಿಕೊಳ್ಳುತ್ತಿದ್ದರು.

ಅವರು panelist ಆಗಿದ್ದರು. ಆರ್.ವಿ.ವೆಂಕಟೇಶ್ ರವರಿಗೆ ಮತ್ತು ಇವರಿಗೆ ಬಹಳ ಒಡನಾಟವಿತ್ತು, ಆರ್.ವಿ.ವೆಂಕಟೇಶ್ ರವರು ನಿನ್ನೆ ಹೇಳಿದರು. ಅವರು ಯಾವಾಗಲು ನನ್ನ ಜೊತೆಯಲ್ಲೇ ಇರುತ್ತಿದ್ದರು ಹಾಗೂ ಅವರು ನಾವು ಬಹಳಷ್ಟು ಸಂದಭಗಳಲ್ಲಿ ಸೈದ್ಧಾಂತಿಕ ನಿಲುವಿನ ಮೇಲೆ ಹೋರಾಟ ಮಾಡುತಿದ್ದೆವು ಎನ್ನುವಂತಹ ಮಾತುಗಳನ್ನು ಹೇಳುತ್ತಿದ್ದರು. ನಾನೆ ಸ್ವತಃ ಅವರಿಬ್ಬರ ನಡುವೆ ವಾಗ್ವಾದ ಆಗುವುದನ್ನು ನೊಡಿದ್ದೇನೆ. ಅವರು ತಮ್ಮ ವಿಚಾರವನ್ನು ಮಂಡಿಸುತ್ತಿದ್ದರು, ಇವರು ಇವರ ವಿಚಾರವನ್ನು ಅಷ್ಟೇ ಸ್ನೇಹದಿಂದ ಮಂಡಿಸುತ್ತಿದ್ದರು. ಅಷ್ಟು ಪ್ರಖರವಾಗಿ ಇಷ್ಟು ಕಡಿಮೆ ಅವಧಿಯಲ್ಲಿ ಶಾಸಕನಾಗಿ, ಬಹುತರವಾಗಿ ಅವರ ಮಾತುಗಳನ್ನು ಕೇಳಿದಾಗ ನನಗೆ ಅನಿಸಿದ್ದು ಇವರು 20–25 ವರ್ಷಗಳ ಕಾಲ ಶಾಸನ ಸಭೆಯ ಸದಸ್ಯರಾದಾಗ ಏನು ಅನುಭವ ಇರಬೇಕೋ ಅದಕ್ಕಿಂತ ಹೆಚ್ಚಿನ ಅನುಭವವನ್ನು ಹೋಂದಿದವರು ಎನ್ನುವಂತಹ ಒಂದು ಭಾವನೆ ನನಗೆ ಪ್ರತಿ ಸಂದರ್ಭದಲ್ಲೂ ಬರುತಿತ್ತು. ಇವರು ಒಬ್ಬ ಅತ್ಯಂತ ಶ್ರೇಷ್ಠ ಸಂಸದೀಯ ಪಟ್ಟು ಆಗಿದ್ದರು. ಬೆಂಗಳೂರು ನಗರದ ಅಭಿವೃದ್ಧಿಯಲ್ಲಿ ತಮ್ಮದೇ ಆದಂತಹ ಕನಸನ್ನು ಕಂಡಂತಹವರು, ಇಡೀ ವಿಶ್ವದ ಗಮನ ಸೆಳೆದಂತಹ ವಿಶ್ವ ನಗರವಾದಂತಹ ಬೆಂಗಳೂರಿನ ಬಗ್ಗೆ ಅವರೇನು ಒಂದು ಕಲ್ಪನೆ ಹೊಂದಿದ್ದರು, ಅದನ್ನು ಮಧ್ಯದಲ್ಲೇ ಬಿಟ್ಟು ಹೋದಂತಹ ಸಂದರ್ಭದಲ್ಲಿ, ಅವರ ವಿಚಾರಗಳೇನಿದ್ದವು, ಅವರ ಹೆಜ್ಜೆ ಗುರುತುಗಳನ್ನು ಮೂಡಿಸಿ ಹೋಗಿದ್ದಾರೆ ಅವುಗಳನ್ನು ನಾವು ಅನುಸರಿಸಿಕೊಂಡು ಹೋಗುವಂತಹ ಕೆಲಸಗಳನ್ನು ನಾವು ಮಾಡಿದರೆ ನಿಜವಾಗಲು ಅವರಿಗೆ ಭಾವಪೂರ್ಣವಾದಂತಹ ಶ್ರದ್ಧಾಂಜಲಿಯನ್ನು ಅರ್ಪಿಸಿದಂತಾಗುತ್ತದೆ ಎನ್ನುವಂಥ ಭಾವನೆಯಿಂದ ಇವತ್ತು ಅವರ ನಿಧನ ನಿಜವಾಗಲು ಈ ಅಧಿವೇಶನ ಪ್ರಾರಂಭವಾದಾಗಿನಿಂದ ಹಾಲಿ ಮೂರನೆ ಶಾಸಕರನ್ನು ನಾವು ಕಳೆದುಕೊಳ್ಳುತ್ತಿದ್ದೇವೆ. ಒಳ್ಳೆಯ ಸಂಸದೀಯ ಪಟುವಾಗಿದ್ದಂಥ ಶ್ರೀ ಜಗದೀಶ್ ಕುಮಾರ್‌ರವರ ಆತ್ಮಕ್ಕೆ, ಆ ಚೇತನಕ್ಕೆ ಭಗವಂತನು ಸದ್ಗತಿಯನ್ನು ನೀಡಲಿ ಮತ್ತು ಅವರ ಅಗಲಿಕೆಯ ನೋವನ್ನು ಸಹಿಸುವಂಥ ಶಕ್ತಿ ಅವರ ಕುಟುಂಬ ವರ್ಗದವರಿಗೆ, ನಮಗೆಲ್ಲರಿಗೆ ಮತ್ತು ಅವರ ಅಭಿಮಾನಿಗಳಿಗೆ, ಈ ನಾಡಿನ ಸಮಸ್ತ ಜನತೆಗೆ ನೀಡಲಿ ಎನ್ನುವ ಪ್ರಾರ್ಥನೆಯನ್ನು ಆ ಭಗವಂತನಲ್ಲಿ ಮಾಡಿ ಮತ್ತೊಮ್ಮೆ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ನಿನ್ನೆಯ ದಿವಸ ಬೆಳಿಗ್ಗೆ ಪ್ಯಾಲೆಸ್ ಗ್ರೌಂಡ್‌ನಲ್ಲಿ ನನ್ನ ಸ್ನೇಹಿತರೊಬ್ಬರ ಮಗನ ಮದುವೆಯನ್ನು ಮುಗಿಸಿಕೊಂಡು ನಾನು ಮೇನ್ ರೋಡ್‌ಗೆ ಬಂದಾಗ ಜಗದೀಶ್ ಕುಮಾರ್‌ರವರ ಕಾರ್ ಸಹ ಮೇನ್ ರೋಡಿನಲ್ಲಿ ಬರುತ್ತಿತ್ತು. ನಮ್ಮ ಕಾರನ್ನು ನೋಡುತ್ತಿದ್ದ ಹಾಗೆ ಅವರು ತಕ್ಷಣ ತಮ್ಮ ಕಾರಿನಿಂದ ಇಳಿದು ಗೌರವ ತೋರಿಸುವ ನಿಟ್ಟಿನಲ್ಲಿ ವಿಧೇಯತೆಯನ್ನು ತೋರಿಸಲು ಹೊರಟರು. ತಕ್ಷಣವೇ ನಾನು ನಿಮ್ಮ ಕಾರಿನಲ್ಲಿ ಕುಳಿತುಕೊಳ್ಳಿ ಸಾಕಷ್ಟು ಟ್ರಾಫಿಕ್ ಜಾಮ್ ಆಗಿದೆ ಎಂದು ನಾನೇ ಅವರನ್ನು ಕಳುಹಿಸಿದೆ. ಇಬ್ಬರೂ ಒಟ್ಟಿಗೆ ಫ್ರೀಡಂಪಾರ್ಕ್‌ಗೆ ಬಂದೆವು. ಜಗದೀಶ್ ಕುಮಾರ್ ಒಬ್ಬ ಒಳ್ಳೆಯ ಹೋರಾಟಗಾರ. ಭಾರತೀಯ ಜನತಾ ಪಾರ್ಟಿ ವಿಧಾನ ಸೌಧ ಮುತ್ತಿಗೆ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದಂಥ ಸಂದರ್ಭದಲ್ಲಿ ನಾನು ಭಾಷಣವನ್ನು ಮಾಡುತ್ತಿರುವಂಥ ಸಂದರ್ಭದಲ್ಲಿ ಅವರು ನಿನ್ನೆಯ ದಿವಸ ಸುಮಾರು ಇದೇ ಸಮಯದಲ್ಲಿ ನನ್ನ ಪಕ್ಕದಲ್ಲಿಯೇ ನಿಂತಿದ್ದರು. ಇವತ್ತು ಜಗದೀಶ್ ಕುಮಾರ್‌ರವರು ನಮ್ಮ ಜೊತೆಗೆ ಇಲ್ಲ ಎನ್ನುವುದನ್ನು ನಿನ್ನೆಯ ದಿವಸ ಸಂಜೆ ಬಂದು ನಮ್ಮ ಕಾರ್ಯಕರ್ತರು ಹೇಳಿದಾಗ ಅದನ್ನು ನಾವು ನಂಬುವುದಕ್ಕೆ ಆಗಲಿಲ್ಲ. ಅವರು ಬಹಳ ಸ್ನೇಹ ಜೀವಿಯಾಗಿದ್ದರು. ಹೆಬ್ಬಾಳದಿಂದ ಅವರು ಚುನಾವಣೆಗೆ ಸ್ಪರ್ಧಿಸುತ್ತಾರೆ ಎನ್ನುವ ಕನಸನ್ನು ಸಹ ಅವರು ಕಂಡಿರಲಿಲ್ಲ. ಹಿಂದಿನ ನಮ್ಮ ಸರ್ಕಾರ ಆಡಳಿತಾವಧಿಯಲ್ಲಿ ಅನೇಕ ಮಂತ್ರಿಗಳ ಜೊತೆಗೆ ಅವರ ಸ್ನೇಹ ತುಂಬ ಚೆನ್ನಾಗಿತ್ತು. ಎಷ್ಟರಮಟ್ಟಿಗೆ ಎಂದರೆ ಯಾವುದಾದರೂ ಫೈಲ್‌ನಲ್ಲಿ ಏನಾದರೂ ಕಾನೂನಿನ ಡಿಸ್ಪ್ಯೂಟ್ ಇದ್ದರೆ, ನಿಮಗೆ ಮತ್ತು ಮಂತ್ರಿಗಳಿಗೆ ಗೊತ್ತಿದೆ. ಐಎಎಸ್ ಅಧಿಕಾರಿಗಳು, ಪ್ರೈವೇಟ್ ಸೆಕ್ರೆಟರಿಗಳು ಇದ್ದರೂ ಸಹ ಏನೇ ವಿಶೇಷವಾದ ಒಂದು ಕಗ್ಗಂಟಿನ ಸಮಸ್ಯೆ ಬಂದಾಗ, ನಾವಿನ್ನು ಗೊಂದಲದಲ್ಲಿದ್ದಾಗ ಯಾರ ಬಳಿ ಸಲಹೆಯನ್ನು ಕೇಳಬೇಕು ಎನ್ನುವ ಪ್ರಶ್ನೆ ಬಂದಾಗ ಅನೇಕ ಜನ ಮಂತ್ರಿಗಳು ಜಗದೀಶ್ ಕುಮಾರ್‌ರವರನ್ನು ಕರೆಸುತ್ತಿದ್ದರು. ಜಗದೀಶ್ ಕುಮಾರ್‌ರವರು ಬಹಳಷ್ಟು ವಿಚಾರಗಳನ್ನು ತಿಳಿದುಕೊಂಡಿದ್ದರು. ಅವರು ಕಾನೂನನ್ನು ತಿಳಿದುಕೊಂಡಿದ್ದರು ಮತ್ತು ಪ್ರಾಕ್ಟಿಕಲ್ ಆಗಿ ಏನೇನು ಸಮಸ್ಯೆಗಳು ಬರಬಹುದು ಎನ್ನುವ ವಿಚಾರಗಳು ಸಹ ಅವರಿಗೆ ಗೊತ್ತಿತ್ತು. ಯಾವುದೇ ಒಂದು ಫೈಲ್‌ನ್ನು ಇಟ್ಟುಕೊಂಡಾಗ, ಆ ಫೈಲ್‌ನ್ನು ಯಾವ ಕಾರಣಕ್ಕೂ ನೀವು ಸಹಿ ಮಾಡಬೇಡಿ ಎಂದು ಸ್ಪಷ್ಟವಾಗಿ ಅನೇಕ ಮಂತ್ರಿಗಳಿಗೆ ಅವರು ಹೇಳುತ್ತಿದ್ದರು. ಯಾರದಾದರೂ ಒತ್ತಡಕ್ಕೆ ಸಹಿಯನ್ನು ಹಾಕಿ ಕಳುಹಿಸಿಬಿಟ್ಟರೆ ನಾಳೆಯ ದಿವಸ ನೀವು ಅನುಭವಿಸಬೇಕಾಗುತ್ತದೆ. ಇಂತಹ ಪರಿಸ್ಥಿತಿ ಬಂದಾಗ ಕೊನೆಗೆ ಅವರು ಬಹಳ ಸಲಹೆಯನ್ನು ಕೊಡುತ್ತಿದ್ದರು. ಅಧಿಕಾರಿಗಳು ಇದನ್ನು ಮಾಡಬಹುದು ಎಂದು ಹೇಳಿದ್ದಾರೆ, ಮುಂದೆ ಇದನ್ನು ಮುಖ್ಯಮಂತ್ರಿಗಳು ಮಾಡಬೇಕು. ನೀವಿದಕ್ಕೆ ಒಪ್ಪಿಗೆಯನ್ನು ಕೊಡುವುದಕ್ಕೆ ಹೋಗಬೇಡಿ. ಅಧಿಕಾರಿಗಳು ಈ ರೀತಿಯಾಗಿ ಹೇಳಿದ್ದಾರೆ, ಇದನ್ನು ನಿಮ್ಮ ಅವಗಾಹನೆಗೆ

ತರುತ್ತಿದ್ದೇನೆಂದು ಹೇಳಿ ಮುಖ್ಯಮಂತ್ರಿಗಳಿಗೆ ಕಳುಹಿಸಿಬಿಡುತ್ತಿದ್ದರು. ನೀವೇಕೆ ಇದರಲ್ಲಿ ಸಿಕ್ಕಿ ಹಾಕಿಕೊಳ್ಳುತ್ತೀರಿ ಎಂದು ಈ ರೀತಿಯ ಸಲಹೆಗಳನ್ನು ಜಗದೀಶ್ ಕುಮಾರ್‌ರವರು ಕೊಡುತ್ತಿದ್ದರು. ಹೀಗೆ ಅವರು ಬಹಳ ತಿಳುವಳಿಕಸ್ಥರಾಗಿದ್ದರು. ಅವರು ಒಂದು ವಿಚಾರಕ್ಕೆ ಅಂಟಿಕೊಂಡಿದ್ದು ಈಗಲ್ಲ. ಅವರು ಕಾಲೇಜಿನಲ್ಲಿರಬೇಕಾದರೆ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ ಕಾರ್ಯದರ್ಶಿಯಾಗಿ, ವಿದ್ಯಾರ್ಥಿ ನಾಯಕನಾಗಿಯೂ ಸಹ ಹೋರಾಟವನ್ನು ಮಾಡಿದಂಥವರು. ಜಗದೀಶ್ ಕುಮಾರ್‌ರವರನ್ನು ನೋಡಿದರೆ ಇವರು ಇಂತಹ ಒಬ್ಬ ಹೋರಾಟಗಾರರೇ, ಇಂತಹ ಒಬ್ಬ ಸಂಘಟಕರೇ ಎಂದು ಅನುಮಾನ ಬರುತ್ತದೆ. ಈ ರೀತಿ ಸಂಘಟನೆಯಲ್ಲಿದ್ದುಕೊಂಡು ಹೋರಾಟಗಳನ್ನು ಮಾಡಿಕೊಂಡು ಬಂದಂಥ ಒಬ್ಬ ವ್ಯಕ್ತಿ ಜಗದೀಶ್ ಕುಮಾರ್. ಆಕಸ್ಮಿಕವಾಗಿ ಅವರಿಗೆ ಹೆಬ್ಬಾಳ ವಿಧಾನ ಸಭಾ ಕ್ಷೇತ್ರದಿಂದ ಸ್ಪರ್ಧೆ ಮಾಡಲು ಅವಕಾಶ ಸಿಕ್ಕಿತು. ಕ್ಷೇತ್ರದಲ್ಲಿ ಬಹಳ ಜನರಿಗೆ ಪರಿಚಯವಿದ್ದೂ ಸಹ ಇವರು ಗೆಲ್ಲುತ್ತಾರೆಯೇ ಎನ್ನುವ ಅನುಮಾನವಿತ್ತು. ಆದರೆ ಅವರು ಗೆದ್ದು ಬಂದರು. ಉಳಿದಂಥ ಎರಡುವರೆ ವರ್ಷಗಳಲ್ಲಿ ಜಗದೀಶ್ ಕುಮಾರ್‌ರವರು ಮನೆ ಮನೆಗೆ ಪರಿಚಿತರಾಗಿದ್ದರು. ಯಾರ ಮನೆಗೆ ಹೋದರೂ ಸಹ ಇವರು ನಮ್ಮ ಎಂಎಲ್‌ಎ, ಇವರ ಬಳಿ ಹೋದರೆ ನಮ್ಮ ಕೆಲಸವಾಗುತ್ತದೆ ಎಂದು ಹೇಳುತ್ತಿದ್ದರು. ಇಷ್ಟರಮಟ್ಟಿಗೆ ಜನಾನುರಾಗಿ ಶಾಸಕನಾಗಿ ಕೆಲಸ ಮಾಡುತ್ತಿದ್ದಂತಹ ಒಬ್ಬ ವ್ಯಕ್ತಿಯಾಗಿದ್ದರು. ವಿದ್ಯುನ್ಮಾನ ಮಾಧ್ಯಮದಲ್ಲಿ ಚರ್ಚೆಗೆ ಹೋದರೆ ಅಲ್ಲಿಯೂ ಸಹ ಅಷ್ಟೇ, ಆ ವಿಷಯವನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಂಡು ಆ ವಿಷಯದ ಬಗ್ಗೆ ಬಹಳ ವಿಶೇಷವಾದ ಒಂದು ಅಭಿಪ್ರಾಯವನ್ನು ಮೂಡಿಸುವುದರಲ್ಲಿ ಯಶಸ್ವಿಯಾಗುತ್ತಿದ್ದರು ಮತ್ತು ಆ ಚರ್ಚೆಯಲ್ಲಿ ಗೆಲ್ಲುತ್ತಿದ್ದರು. ಅದು ಯಾವುದಾದರೂ ಒಂದು ವಿಚಾರದ ಬಗ್ಗೆ ಇರಬಹುದು ಅಥವಾ ರಾಷ್ಟ್ರೀಯ ವಿಚಾರಗಳ ಬಗ್ಗೆ ಇರಬಹುದು. ತನ್ನ ಭಾವನೆಯನ್ನು ಬಹಳ ಸ್ಪಷ್ಟವಾಗಿ ವಿದ್ಯುನ್ಮಾನ ಮಾಧ್ಯಮದಲ್ಲಿ ಇಡುತ್ತಿದ್ದಂಥ ಒಬ್ಬ ಯುವಕ ಎಂದರೆ ಅದು ತಪ್ಪಾಗಲಿಕ್ಕಿಲ್ಲ. ಸದನದಲ್ಲಿ ಅವರು ಭಾಗವಹಿಸದೇ ಇರುವ ದಿನವೇ ಇಲ್ಲ. ಹೆಚ್ಚು-ಕಡಿಮೆ ಶೇಕಡ 100ರಷ್ಟು ಹಾಜರಾತಿ ಇರುತ್ತಿತ್ತು. ಕೇವಲ ಹಾಜರಾತಿ ಅಲ್ಲ. ಪ್ರತಿ ವಿಚಾರದಲ್ಲಿಯೂ ಸಹ ಅವರು ಚರ್ಚೆಯಲ್ಲಿ ಭಾಗವಹಿಸುತ್ತಿದ್ದರು. ಇವತ್ತು ಬೆಳಿಗ್ಗೆ ವಿಧಾನ ಪರಿಷತ್ತು ಮತ್ತು ವಿಧಾನ ಸಭೆಯ ಎಲ್ಲಾ ಭಾರತೀಯ ಜನತಾ ಪಾರ್ಟಿಯ ಸದಸ್ಯರು ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದೆವು. ಆ ಸಂದರ್ಭದಲ್ಲಿ ನಮ್ಮ ವಿಧಾನ ಸಭೆಯ ವಿರೋಧ ಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್‌ರವರು ಹೇಳುತ್ತಿದ್ದರು. ಅನೇಕ ವಿಚಾರಗಳ ಬಗ್ಗೆ ಚರ್ಚೆ ಬಂದಂಥ ಸಂದರ್ಭದಲ್ಲಿ ಸಭಾಧ್ಯಕ್ಷರಾದ ಶ್ರೀ ಕಾಗೋಡು ತಿಮ್ಮಪ್ಪನವರು ಕೊನೆಗೆ "ಜಗದೀಶ್ ಕುಮಾರ್ ಇದಕ್ಕೇನು ಹೇಳುತ್ತೀರಿ, ನಿಮ್ಮ ಅಭಿಪ್ರಾಯವೇನು" ಎಂದು ನಿರ್ದಿಷ್ಟವಾಗಿ ಅವರಿಗೆ ಕೇಳುತ್ತಿದ್ದರಂತೆ. ಅಂದರೆ ಇಷ್ಟರಮಟ್ಟಿಗೆ ವಿಚಾರಗಳನ್ನು ತಿಳಿದುಕೊಂಡಂಥ ಒಬ್ಬ ವ್ಯಕ್ತಿಯಾಗಿದ್ದರು. ಅಂತಹ ವ್ಯಕ್ತಿ ನಮ್ಮ ಜೊತೆಗಿಲ್ಲ ಎಂದು ಹೇಳಿಕೊಳ್ಳುವುದು ಬೇರೆ. ಆಸ್ಪತ್ರೆಗೆ ಎಲ್ಲರೂ

ಸಹ ಬದುಕುವುದಕ್ಕೆ ಹೋಗುತ್ತಾರೆ. ಆದರೆ ಜಗದೀಶ್ ಕುಮಾರ್‌ರವರು ಆಸ್ಪತ್ರೆಗೆ ಸಾಯುವುದಕ್ಕಾಗಿಯೇ ಹೋದ ಹಾಗಾಯಿತು. ಇವರು ಆಸ್ಪತ್ರೆಗೆ ಹೋದಂಥ ಸಂದರ್ಭದಲ್ಲಿ ವೈದ್ಯರು ನಾಳೆಯ ದಿವಸ Angiogram ಮಾಡೋಣವೆಂದು ಹೇಳಿದ್ದಾರೆ. ಜಗದೀಶ್ ಕುಮಾರ್‌ರವರ ಜೊತೆಯಲ್ಲಿದ್ದವರು ಅಲ್ಲಿ ಅವರನ್ನು ಕೂರಿಸಿ ನಾಳೆಯ ದಿವಸ ಏನು ಆಪರೇಷನ್ ಮಾಡಬೇಕು ಅದಕ್ಕೆ ಆಸ್ಪತ್ರೆಯಲ್ಲಿ ರೂಂ ಬುಕ್ ಮಾಡುವುದಕ್ಕಾಗಿ ಹಣವನ್ನು ಕಟ್ಟುವುದಕ್ಕೆ ಹೋದಂಥ ಸಂದರ್ಭದಲ್ಲಿ ಇವರಿಗೆ massive heart attack ಆಗಿ ತೀರಿಕೊಂಡಿದ್ದಾರೆ. ಅಂದರೆ ತಾವು ಹೇಳಿದ ಹಾಗೆ ಭಗವಂತ ಈ ರೀತಿ ನಮ್ಮ ಶಾಸಕರುಗಳನ್ನು ಕರೆದುಕೊಳ್ಳುತ್ತಿರುವುದನ್ನು ನೋಡಿದರೆ. ಇವತ್ತು ಮೂರನೇ ದಿನ ಮೂರು ಜನ ಶಾಸಕರನ್ನು ನಾವು ಕಳೆದುಕೊಂಡಿದ್ದೇವೆ. ಭಗವಂತ ಈ ರೀತಿ ನಮ್ಮ ಶಾಸಕರುಗಳನ್ನು ಕರೆದುಕೊಳ್ಳುತ್ತಿರುವುದನ್ನು ನೋಡಿದರೆ ಶಾಸಕರುಗಳ ಮೇಲೆ ಭಗವಂತನಿಗೆ ಪ್ರೀತಿನೋ, ಸಿಟ್ಟೋ ಎನ್ನುವುದು ನನಗಂತೂ ಗೊತ್ತಿಲ್ಲ. ಇಂತಹ ವ್ಯಕ್ತಿಗಳನ್ನು ನಾವು ಕಳೆದುಕೊಳ್ಳುತ್ತಿರುವುದು ಇದು ತುಂಬಾ ಅನ್ಯಾಯ. ಏಕೆಂದರೆ ಇವರು ಇನ್ನು ತುಂಬಾ ಬೆಳೆಯುವಂಥ ಒಬ್ಬ ಶಾಸಕರಾಗಿದ್ದರು. ಇವತ್ತಿನ ರಾಜಕಾರಣದಲ್ಲಿ ಜಾತಿ ಬಿಟ್ಟರೆ ರಾಜಕಾರಣವಿಲ್ಲ. ವೈಶ್ಯರ ಪೈಕಿ ಇಡೀ ಹೆಬ್ಬಾಳ ಕ್ಷೇತ್ರದಲ್ಲಿ ಅವರು ನೂರು ಮತಗಳು ಸಹ ಇಲ್ಲ. ಈ ರೀತಿ ಜನಪ್ರಿಯತೆಯ ಮೇಲೆ ಗೆದ್ದು ಬಂದಂಥ ಒಬ್ಬ ವ್ಯಕ್ತಿಯಾಗಿದ್ದರು ಜಗದೀಶ್ ಕುಮಾರ್. ಈ ಸಂದರ್ಭದಲ್ಲಿ ಏನು ಹೇಳಬೇಕೆಂದು ನನಗೆ ತೋಚುತ್ತಿಲ್ಲ. ಇಲ್ಲಿ ಹೇಳಬೇಕೆಂದು ಹೇಳುತ್ತಿದ್ದೇನೆ. ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈ ಸಂದರ್ಭದಲ್ಲಿ ಈ ಶೋಕದಲ್ಲಿ ಏನು ಹೇಳಬೇಕೆಂದು ನನಗಂತೂ ತೋಚುತ್ತಿಲ್ಲ. ನಿನ್ನೆಯ ದಿವಸ ನಾವು ಅಲ್ಲಿಗೆ ಹೋದಾಗ ಅವರ ಹೆಂಡತಿ ಮತ್ತು ಇಬ್ಬರೂ ಹೆಣ್ಣುಮಕ್ಕಳು ದುಃಖದಲ್ಲಿರುವುದನ್ನು ನಿಜಕ್ಕೂ ನೋಡುವುದಕ್ಕೆ ನಮ್ಮ ಕೈಯಲ್ಲಿ ಆಗಲಿಲ್ಲ. ಏಕೆಂದರೆ ಕುಟುಂಬದ ಜೊತೆಗೂ ಸಹ ಆತನ ಸಂಬಂಧ ಹಾಗೆಯೇ ಇತ್ತು. ರಾಜಕಾರಣಿಗಳಲ್ಲಿ ಅನೇಕರಿಗೆ ಕುಟುಂಬಕ್ಕೂ ಅವರಿಗೂ ಸಂಬಂಧವೇ ಇಲ್ಲದ ಹಾಗೆ ಇರುತ್ತಾರೆ. ಬೆಳಿಗ್ಗೆ ಎದ್ದು ಹೋದರೆ ರಾತ್ರಿ 1 ಗಂಟೆ ಅಥವಾ 2 ಗಂಟೆಗೆ ಅವರು ಮನೆಗೆ ಹೋಗಿ ಸೇರಿಕೊಳ್ಳುತ್ತಾರೆ. ಆದರೆ ಜಗದೀಶ್ ಕುಮಾರ್ ಬೆಳಿಗ್ಗೆ ಎದ್ದು ಸ್ನಾನ ಮಾಡಿ, ಪೂಜೆ ಮಾಡಿ, ಮನೆಯವರ ಜೊತೆಗೆ ವಿಶ್ವಾಸದಲ್ಲಿದ್ದು, ಒಳ್ಳೆಯ ಮಾತುಗಳನ್ನಾಡಿ ಮತ್ತು ಅವರಿಗೆ ಕುಟುಂಬದ ಸಂಬಂಧ ಎಷ್ಟರಮಟ್ಟಿಗೆ ಇತ್ತು ಎಂದರೆ ಅವರು ಕುಟುಂಬದ ಜೊತೆಗೆ ಬಹಳಷ್ಟು ಪ್ರವಾಸಗಳನ್ನು ಕೈಗೊಳ್ಳುತ್ತಿದ್ದರು. "ಏನ್ ಸರ್, ಜೀವನದಲ್ಲಿ ಇರುತ್ತೇವೆ, ಹೋಗುತ್ತೇವೆ. ಮನೆಯವರ ಜೊತೆಗೂ ಚೆನ್ನಾಗಿರಬೇಕು. ಯಾರು ಚುನಾವಣೆಯಲ್ಲಿ ಗೆಲ್ಲಿಸಿರುತ್ತಾರೋ ಆ ಜನರಿಗೂ ಸೇವೆ ಮಾಡಬೇಕಾದುದು ನಮ್ಮ ಕರ್ತವ್ಯವಾಗಿದೆ. ನಾವು ಈ ಸಮಾಜದಲ್ಲಿ ಹುಟ್ಟಿ ಬೆಳೆದಿದ್ದೇವೆ. ಆದ್ದರಿಂದ ನಾವು ಈ ಸಮಾಜದ ಋಣವನ್ನು ಸಹ ತೀರಿಸಬೇಕು." ಎಂದು ಹೇಳುತ್ತಿದ್ದರು. ಈ ರೀತಿ ವೈಶಿಷ್ಟ್ಯಪೂರ್ಣವಾದ ಜೀವನ ಅವರದ್ದಾಗಿತ್ತು. ಇಂತಹ ವ್ಯಕ್ತಿಯನ್ನು ನಾವು ಇವತ್ತಿನ ದಿವಸ

ಕಳೆದುಕೊಂಡಿದ್ದೇವೆ. ಅವರ ಕುಟುಂಬದವರಿಗೆ ಯಾವ ರೀತಿ ಸಮಾಧಾನ ಮಾಡಬೇಕೋ, ಅವರ ನೋವನ್ನು ನುಂಗುವ ನಿಟ್ಟಿನಲ್ಲಿ ಎಷ್ಟರಮಟ್ಟಿಗೆ ಶ್ರಮ ಹಾಕಬೇಕೋ, ನಿಜಕ್ಕೂ ಭಗವಂತನಿಗೂ ಸಹ ಇದು ಕಷ್ಟವಾಗಬಹುದೇನೋ ನನಗೆ ಗೊತ್ತಿಲ್ಲ. ಅವರ ಮತ್ತು ಅವರ ಕುಟುಂಬದ ಸಂಬಂಧ ಅಷ್ಟರಮಟ್ಟಿಗೆ ಚೆನ್ನಾಗಿತ್ತು. ಭಗವಂತ ಅವರ ಕುಟುಂಬದವರಿಗೆ ಅವರ ಅಗಲಿಕೆಯಿಂದ ಉಂಟಾದ ನೋವನ್ನು ಭರಿಸುವಂಥ ಶಕ್ತಿಯನ್ನು ಕೊಡಲಿ ಎಂದು ಕೇಳಿಕೊಳ್ಳುತ್ತೇನೆ. ಶ್ರೀ ಜಗದೀಶ್ ಕುಮಾರ್‌ರವರ ಆತ್ಮಕ್ಕೆ ಖಂಡಿತವಾಗಿ ಶಾಂತಿ ಸಿಕ್ಕೇ ಸಿಗುತ್ತದೆ. ಏಕೆಂದರೆ ಸಮಾಜದಲ್ಲಿ ಆತ ಮಾಡಿದಂಥ ಕೆಲಸಗಳನ್ನು ಅವರನ್ನು ಹತ್ತಿರದಿಂದ ನೋಡಿದವರಿಗೆ ಮಾತ್ರ ಗೊತ್ತಾಗುತ್ತದೆ.

ನಾಮ್ ಕೇ ವಾಸ್ತೆ ನಾವು ಏನೋ ಒಂದು ಶ್ರದ್ಧಾಂಜಲಿ ಅರ್ಪಿಸಿ ಹೋಗುವಂತಹ ಪ್ರಶ್ನೆಯಿಲ್ಲ. ಸಮಾಜ ಸೇವೆ ಮಾಡುತ್ತಿದ್ದ ವ್ಯಕ್ತಿ, ಪ್ರಾಮಾಣಿಕ ವ್ಯಕ್ತಿ. ವೃತ್ತಿಯಲ್ಲಿ ಆರ್ಥಿಕ ಸಲಹೆಗಾರರು ಎಂದು ತಾವು ಪ್ರಸ್ತಾಪ ಮಾಡಿದಿರಿ. ಬೆಂಗಳೂರು ಶೇರು ವಿಮೆ ಕೇಂದ್ರದ ಅಧ್ಯಕ್ಷರಾಗಿ ಮೂರನೇ ಸಲ ಸೇವೆ ಸಲ್ಲಿಸುತ್ತಿದ್ದರು. ಅಂತಹ ಒಬ್ಬ ವ್ಯಕ್ತಿ ಇವತ್ತು ನಮ್ಮ ಜೊತೆಯಲ್ಲಿ ಇಲ್ಲ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಹೇಳಿ ನನ್ನ ಶ್ರದ್ಧಾಂಜಲಿ ಅರ್ಪಿಸುತ್ತೇನೆ.

**ಸಭಾಪತಿಗಳು:–** ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ. ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

**(ಈ ಹಂತದಲ್ಲಿ ಸದನವು ಒಂದು ನಿಮಿಷ ಎದ್ದು ನಿಂತು ಗೌರವವನ್ನು ಸೂಚಿಸಿತು)**

ಸದನದಲ್ಲಿ ಪ್ರಸ್ತಾಪಿಸಿದ ಸಂತಾಪ ಸೂಚನೆಯನ್ನು ಮೃತ ಗಣ್ಯರ ಕುಟುಂಬ ವರ್ಗದವರಿಗೆ ಕಳುಹಿಸಿ ಕೊಡಲಾಗುವುದು. ಮೃತ ಜಗದೀಶ್‌ಕುಮಾರ್‌ರವರ ಗೌರವಾರ್ಥ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಯ ತನಕ ಮುಂದೂಡುತ್ತಿದ್ದೇನೆ.

**(ಸದನವು ಬೆಳಿಗ್ಗೆ 11 ಗಂಟೆ 32 ನಿಮಿಷಕ್ಕೆ<br>ಮುಕ್ತಾಯಗೊಂಡು ಪುನಃ ದಿನಾಂಕ 25ನೇ ನವೆಂಬರ್ ಮಾಹೆ<br>2015ರ ಬುಧವಾರದಂದು ಬೆಳಿಗ್ಗೆ 11.00 ಗಂಟೆಗೆ<br>ಸೇರಲು ನಿಶ್ಚಯಿಸಿತು)**